ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 17-11-2023 ರಂದು ಬೊಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ನಾನು ಸಲ್ಲಿಸುತ್ತಿರುವ ಪ್ರಮಾಣ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಮತ್ತು ಪ್ರಮಾಣಪತ್ರದಲ್ಲಿರುವ ವಿಷಯಗಳು ನಾನೇ ಹೇಳಿ ಬರೆಸಿರುತ್ತೇನೆ. ಈ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯ ಭಾಗವಾಗಿ ಪರಿಗಣಿಸಲು ಹಾಜರುಪಡಿಸಿರುತ್ತೇನೆ.

ನಿ.ಪಿ-7 ನ್ನು ನಾನೇ ತಯಾರಿಸಿರುತ್ತೇನೆ. ಸಾಕ್ಷಿಯು ಸದರಿ ನಿ.ಪಿ-7 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-7(ಡಿ) ಎಂದು ಗುರುತಿಸಲಾಯಿತು. ಸೈರೊಬಾ ಮತ್ತು ಇತರ ಇಬ್ಬರು ಸಾಕ್ಷಿದಾರರು ಪುಟ ಸಂಖ್ಯೆ -2 ರಲ್ಲಿ ತಮ್ಮ ತಮ್ಮ ಸಹಿಗಳನ್ನು ಮಾಡಿದ ನಂತರ ನಾನು ಬರಹಗಾರನೆಂದು ಸಹಿ ಮಾಡಿರುತ್ತೇನೆ. ಸೈರೊಬಾ ಮತ್ತು ಇತರ ಇಬ್ಬರು ಸಾಕ್ಷಿದಾರರುಗಳ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ನಿ.ಪಿ-7(ಎ) ರಿಂದ ನಿ.ಪಿ-7(ಸಿ) ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿಯು ವಿಲುನಾಮೆಯ ಎರಡೂ ಪುಟಗಳಲ್ಲಿ ವಿಲ್ ನಾವೆಯನ್ನು ಬರೆದುಕೊಟ್ಟ ಸೈರೊಬಾ ಇವರ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ನಿ.ಪಿ-7(ಬಿ) ಸಹಿ ಅವರದ್ದೆ ಇರುತ್ತದೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯಾವಾದಿರವರು ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**